## 2

ಹಂಪಿರೋಡಿನ ಊರುಗಳಲ್ಲಿ ರಸ್ತೆಗೂ ಜನರಿಗೂ ಜನ್ಮಾಂತರದ ಸಂಬಂಧ. ರಸ್ತೆ ಅಗಲೀಕರಣದ ಮುಂಚೆ ಬಸ್ಸು ಪ್ರಯಾಣಿಕರು ಸೂರಿಗೆ ಸಿಕ್ಕಿಸಿದ್ದ ವಸ್ತುವನ್ನು ಕೈಚಾಚಿ ಸೆಳೆದುಕೊಂಡು ಹೋಗಬಹುದಿತ್ತು. ಚಾಲಕ ತುಸು ಎಚ್ಚರ ತಪ್ಪಿದರೂ ಬಸ್ಸು ಯಾವುದಾದರೊಂದು ಮನೆಯ ಪಡಸಾಲೆಯಲ್ಲಿ ನುಗ್ಗಿ ಬಂದ ಕೋಣದಂತೆ ನಿಂತಿರಬೇಕಿತ್ತು. ಸರ್ಕಾರಿ ರೋಡೆಂದರೆ ಮನೆಯ ವಿಸ್ತರಣೆ ಎಂದು ಇಲ್ಲಿನ ಜನ ಭಾವಿಸಿದಂತಿದೆ. ಕೆ.ಎಸ್. ನರಸಿಂಹ ಸ್ವಾಮಿ ಅವರ 'ತೆರೆದ ಬಾಗಿಲು' ಕವನವನ್ನು ಚೆನ್ನಾಗಿ ಓದಿರುವಂತೆ ಕಾಣುವ ಇವರು, ಕದವನ್ನು ನಸುಕಿಗೆ ತೆರೆದರೆ ರಾತ್ರಿ ತನಕ ಮುಚ್ಚುವುದೇ ಇಲ್ಲ. ಹೊಸಿಲಿಗೆ ಎರಡು ಮೊಳದಂತರದಲ್ಲಿ ಬಸ್ಸು ಹೊಗೆ ಉಗುಳುತ್ತ ಕಪ್ಪು ಟೈರನ್ನು ಹರಿಸುತ್ತ ಇರುತ್ತದೆ. ಆದರೇನಂತೆ—ಅಲ್ಲೇ ಕೂತು ಎಳೆಗೂಸಿನ ತಾಯಿ ಮಗುವಿಗೆ ಹಾಲೂಡುತ್ತಿರುತ್ತಾಳೆ; ಕಟ್ಟೆಯ ಮೇಲೊಟ್ಟಿದ ಜೋಳಚೀಲಕ್ಕೆ ಬೆನ್ನಾನಿಸಿ ಯಜಮಾನ ಚುಟ್ಟ ಎಳೆಯುತ್ತಿರುತ್ತಾನೆ; ಸೊಸೆಯನ್ನು ಗೊಣಗಿಕೊಂಡು ಅತ್ತೆಯಾದವಳು ಕಾಯಿಪಲ್ಲೆ ಸೋಸುತ್ತಿರುತ್ತಾಳೆ; ಹರೆಯದ ಹುಡುಗಿ ಶಾಲೆಗೆ ಹೊರಡುವ ಮುನ್ನ ಕನ್ನಡಿ ಮುಂದಿಟ್ಟುಕೊಂಡು ತಲೆ ಹೆಕ್ಕಿಕೊಳ್ಳುತ್ತಿರುತ್ತಾಳೆ; ಹೆಂಗಸರ ಕಿಟಿಕಿಟಿ ಸಹಿಸಿಕೊಂಡೇ ಗಂಡಸರು ಚೌಕಬಾರಾ ಆಡುತ್ತಿರುತ್ತಾರೆ; ಮುದುಕಿಯರು ಮೊಮ್ಮಕ್ಕಳನ್ನು ಕಳಿಸಿ ತಟ್ಟೆ ಹೋಟೆಲಿನಿಂದ ತರಿಸಿಕೊಂಡ ಮಿರ್ಚಿಯನ್ನು ಸೆರಗಿನ ಮರೆಯಲ್ಲಿ ಕಚ್ಚಿ ತಿನ್ನುತ್ತ, ಲೋಟದಲ್ಲಿ ಬಿಡಿಸಿಕೊಂಡು ಬಂದ ಟೀಯನ್ನು ಹೀರುತ್ತಿರುತ್ತಾರೆ—ಒಂದೇ ಎರಡೇ? ಸಮಸ್ತ ಸೃಷ್ಟಿ, ಸ್ಥಿತಿ, ಲಯಗಳು ರೋಡಿನ ಸಾನಿಧ್ಯದಲ್ಲೇ ಜರುಗುತ್ತವೆ. ಜಿ.ಎಸ್. ಶಿವರುದ್ರಪ್ಪನವರು 'ಮುಂಬೈ ಜಾತಕ' ಕವಿತೆಯಲ್ಲಿ 'ತಾಯಿ: ಸಾವಿರ ಗಾಲಿ ಉರುಳಿ ಹೊರಳುವ ರಸ್ತೆಯಂಚಿನಲ್ಲೇ ಕೈಹಿಡಿದು ನಡೆಸಿದವಳು' ಎಂದೆಲ್ಲ ಬಣ್ಣಿಸಿದ್ದಾರೆ. ಹಂಪಿರೋಡಿನಲ್ಲಿ ಅಡ್ಡಾಡಿದ್ದರೆ ರಾಷ್ಟ್ರಕವಿಗಳು ಇದನ್ನು ಬರೆಯಲು ಮುಂಬೈಗೆ ಹೋಗುವ ಅಗತ್ಯ ಬೀಳುತ್ತಿರಲಿಲ್ಲ.

ಈ ಭಾಗದ ಊರುಗಳಲ್ಲಿ ಗೃಹಿಣಿಯರು ಮನೆಗೆಲಸ ಅಥವಾ ಮುಸುರೆ ನೀರನ್ನು ನಡುರಸ್ತೆಗೆ ಚೆಲ್ಲಿ, ಜಗತ್ತಿಗೆ ಉಪಕರಿಸಿದ ಹೆಮ್ಮೆಯಿಂದ ಬೋಗುಣಿ ಹಿಡಿದು, ಬಿಂಕದ ಭಂಗಿಯಲ್ಲಿ ಮನೆಯೊಳಗೆ ಹೋಗುವ ದೃಶ್ಯಗಳಿವೆ. ಮುಸುರೆಯಲ್ಲಿ ಸುಖವಾಗಿ ಈಜುತ್ತಿದ್ದ ಬದನೆಯ ತೊಟ್ಟು, ಸೊಪ್ಪಿನಬೇರು, ಉಳ್ಳಾಗಡ್ಡಿ ಸಿಪ್ಪೆ, ಮಂಡಾಳಿನ ಕಾಳು ಅನಾಥವಾಗಿ ರಸ್ತೆ ಮೇಲೆ ಬಿದ್ದಿರಲು, ಅವುಗಳ ಮೇಲೆಯೇ ವಾಹನಗಳು ಚಲಿಸಬೇಕು. ಒಬ್ಬಾಕೆಯ ಮುಸುರೆ ನೀರಿಗಂತೂ ರಸ್ತೆಯ ಡಾಂಬರು ಕಿತ್ತುಹೋಗಿ, ಮೊಳಕಾಲುದ್ದ ಗುಂಡಿಬಿದ್ದು, ಚಿಕ್ಕ ಸರೋವರವೇ ನಿರ್ಮಾಣವಾಗಿತ್ತು. ರಸ್ತೆಗಳನ್ನು ಹೀಗೆ ಸೃಜನಶೀಲವಾಗಿ ಬಳಸುವ ಹವ್ಯಾಸ ಹೇಗೆ ಹುಟ್ಟಿರಬಹುದು ಎಂದು ಸಂಶೋಧನೆ ಮಾಡಿದೆ. ಈ ಭಾಗದ ಮನೆಗಳಿಗೆ ಹಿತ್ತಲ ಬಾಗಿಲು ಇಲ್ಲದಿರುವುದೇ ಕಾರಣವೆಂದು ಪತ್ತೆಯಾಯಿತು. ಮಲೆನಾಡಿಂದ ಬಂದವರಿಗೆ ಇದೆಲ್ಲ ವಿಚಿತ್ರವಾಗಿ ಕಾಣಬಹುದು. ಅಲ್ಲಿ ಹಿತ್ತಲೆಂದರೆ— ಕೈತೋಟ ಮಾಡುವ, ಬಚ್ಚಲ ನೀರನ್ನು ತೆಂಗಿನ ಗಿಡಕ್ಕೆ ಹರಿಸುವ, ಮುಸುರೆ ನೀರನ್ನು ಬಸಳೆಯ ಬುಡಕ್ಕೆ ಚೆಲ್ಲುವ, ತೊಂಡೆ ಚಪ್ಪರದ ಮೇಲೆ ಮಜ್ಜಿಗೆ ಮೆಣಸಿನಕಾಯಿ ಒಣಗಲಿಡುವ, ಪುರುಷ ಜಗತ್ತಿಗೆ ನಿಲುಕದ ವಿಷಯಗಳನ್ನು ಹೆಂಗಸರು ಗುಟ್ಟಾಗಿ ಚರ್ಚಿಸುವ, ಮಕ್ಕಳು ಕದ್ದು ತಂದಿದ್ದನ್ನು ಅಡಗಿಕೊಂಡು ತಿನ್ನುವ, ಅಪರೂಪಕ್ಕೆ ಎರಡೂ ಹಿತ್ತಿಲಬೇಲಿ ಬೆರೆಯುವಲ್ಲಿ ಪ್ರೇಮಿಗಳು ಕೂಡುವ ಕ್ರಿಯಾಶೀಲ ತಾಣ. 'ನಾವೆಲ್ಲ ಲೇಖಕರಾಗಿದ್ದೇ ಹಿತ್ತಲ ಲೋಕಗಳಿಗೆ ಗುಸುಪಿಸು ಮಾತುಗಳಿಗೆ ಕಿವಿಗೊಟ್ಟು' ಎಂದು ಅನೇಕ ದೊಡ್ಡ ಲೇಖಕರು ಸ್ವತಃ ಘೋಷಿಸಿಕೊಂಡಿದ್ದಾರೆ.